# ಕಾಲ ನಿಲ್ಲುವುದಿಲ್ಲ: ಒಂದು ವಿಮರ್ಶಾ ನೋಟ

ಎ.ಆರ್. ಮಹೇಂದ್ರ

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಂಚನಹಳ್ಳಿ, ಕಡೂರು ತಾಲ್ಲೂಕು.

DOI: https://doi.org/10.5281/zenodo.15791322

## ABSTRACT:

ಕಾಲ ಅತ್ಯಮೂಲ್ಯವಾದದ್ದು. ಕಾಲವನ್ನು ಯಾವುದೇ ಕಾರಣಕ್ಕೂ ಮರಳಿ ಪಡೆಯಲಾಗುವುದಿಲ್ಲ. ಭವಿಷ್ಯದಲ್ಲಿ ಬರಲಿರುವ ಕಾಲವನ್ನು ಇಂದೇ ಅನುಭವಿಸುವುದು ಕಷ್ಟ ಸಾಧ್ಯ. ವರ್ತಮಾನದ ಬದುಕು ಮಾತ್ರ ನಮ್ಮದು. ನಮ್ಮ ಜೀವನದ ಪ್ರತಿಯೊಂದರಲ್ಲೂ ಹಾಸು ಹೊಕ್ಕಾಗಿರುವ ಈ ಕಾಲದ ಸದ್ಬಳಕೆ ಮಾಡಿಕೊಳ್ಳದೇ ಹೋದರೆ ಪಶ್ಚಾತ್ತಾಪದ ನಿಟ್ಟುಸಿರು ಕಟ್ಟಿಟ್ಟ ಬುತ್ತಿ. ಹಾಗೆಂದು ಕಳೆದ ಕಾಲವನ್ನು ಮರಳಿ ಪಡೆಯಲು ಯಾವುದೇ ಮಾರ್ಗವಿಲ್ಲ. ಜಗತ್ತಿನ ಅತೀ ಶ್ರೀಮಂತ ವ್ಯಕ್ತಿಯಿಂದಲೂ ಸಾಧ್ಯವಿಲ್ಲ. ಹಾಗೆಂದ ಮಾತ್ರಕ್ಕೆ ಕಾಲ ದುಬಾರಿಯೇನಲ್ಲ. ವರ್ತಮಾನದ ಕಾಲ ಯಾರಿಗೂ ತಾರತಮ್ಯ ಮಾಡದೇ ೨4 ತಾಸು ಎಲ್ಲರಿಗೂ ನೀಡುತ್ತದೆ. ಆದರೆ ಅದು ಯಾರಿಗಾಗಿಯೂ ನಿಲ್ಲುವುದಿಲ್ಲ ಅಥವಾ ಅದು ಯಾರಿಗಾಗಿಯೂ ಮುಂದೆ ಓಡುವುದಿಲ್ಲ. ಬಹಳ ವಿಚಿತ್ರವಾದುದು ಈ ಸಮಯದ ವ್ಯವಹಾರ.

## KEYWORDS:

ಕಾಲ, ಚೆನ್ನವೀರ ಕಣವಿ, ಕಾವ್ಯ, ನೆಲಮುಗಿಲು, ನೆಹರೂ.

ಚೆನ್ನವೀರ ಕಣವಿ ಕನ್ನಡದ ಸಮನ್ವಯ ಕವಿ, ಸುನೀತಗಳ ಸಾಮ್ರಾಟ ಎಂದು ಪ್ರಸಿದ್ಧರಾಗಿದ್ದ ಕನ್ನಡದ ಖ್ಯಾತ ವಿದ್ವಾಂಸ ಮತ್ತು ಹೊಸಗನ್ನಡ ಕಾವ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾಗಿದ್ದರು. ಈ ಕಾಲದಲ್ಲಿ ಕಣವಿ ಅವರು ಬರೆದ 'ಅಪರಾವತಾರ'ದಂಥ ಕವಿತೆಗಳಲ್ಲಿ ರಾಜಕೀಯ ಭ್ರಷ್ಟಾಚಾರದ ಬಗ್ಗೆ ಕಠೋರವಾದ ವ್ಯಂಗ್ಯ ಕಂಡು ಬರುತ್ತದೆ ನಿಜ. ಆದರೆ ರಾಷ್ಟ್ರಜೀವನದಲ್ಲಿ ಯೋಗ್ಯವಾದ ರಾಜಕೀಯ ನಡೆಗಳನ್ನು ಒಪ್ಪಿ, ಮುಜುಗರವಿಲ್ಲದೆ ಆ ಬಗ್ಗೆ ಹೃದಯ ಬಿಚ್ಚಿ ಅವರು ಬರೆದದ್ದು ವಿಶೇಷವಾಗಿದೆ. 'ನೆಹರೂ ನಿವೃತ್ತರಾಗುವುದಿಲ್ಲ' ಎಂಬ ಅಡಿಗರ ಕವಿತೆಯೊಂದಿಗೆ ಕಣವಿ ಅವರ 'ರಾಷ್ಟ್ರದ ಕರೆ', 'ಇಂದೇ ಸೀಮೋಲ್ಲಂಘನ', 'ನೆಹರೂ ಶ್ರದ್ಧಾಂಜಲಿ', 'ಭಾರತ ಸುಪುತ್ರನ ಕೊನೆಯ ಬಯಕೆ' ಮೊದಲಾದ ಪದ್ಯಗಳನ್ನು ಹೋಲಿಸಿ ನೋಡಿದಾಗ ಈ ಇಬ್ಬರು ಕವಿಗಳ ಮನೋಧರ್ಮದ ಅಂತರ ಸ್ಪಷ್ಟವಾಗುತ್ತದೆ.

ಚೆಲುವಾದ ಸುನೀತಗಳು, ಕಾಲ ಅತ್ಯಮೂಲ್ಯವಾದದ್ದು. ಕಾಲವನ್ನು ಯಾವುದೇ ಕಾರಣಕ್ಕೂ ಮರಳಿ ಪಡೆಯಲಾಗುವುದಿಲ್ಲ. ಭವಿಷ್ಯದಲ್ಲಿ ಬರಲಿರುವ ಕಾಲವನ್ನು ಇಂದೇ ಅನುಭವಿಸುವುದು ಕಷ್ಟ ಸಾಧ್ಯ. ವರ್ತಮಾನದ ಬದುಕು ಮಾತ್ರ ನಮ್ಮದು. ನಮ್ಮ ಜೀವನದ ಪ್ರತಿಯೊಂದರಲ್ಲೂ ಹಾಸು ಹೊಕ್ಕಾಗಿರುವ ಈ ಕಾಲದ ಸದ್ಬಳಕೆ ಮಾಡಿಕೊಳ್ಳದೇ ಹೋದರೆ ಪಶ್ಚಾತ್ತಾಪದ ನಿಟ್ಟುಸಿರು ಕಟ್ಟಿಟ್ಟ ಬುತ್ತಿ. ಹಾಗೆಂದು ಕಳೆದ ಕಾಲವನ್ನು ಮರಳಿ ಪಡೆಯಲು ಯಾವುದೇ ಮಾರ್ಗವಿಲ್ಲ. ಜಗತ್ತಿನ ಅತೀ ಶ್ರೀಮಂತ ವ್ಯಕ್ತಿಯಿಂದಲೂ ಸಾಧ್ಯವಿಲ್ಲ. ಹಾಗೆಂದ ಮಾತ್ರಕ್ಕೆ ಕಾಲ ದುಬಾರಿಯೇನಲ್ಲ. ವರ್ತಮಾನದ ಕಾಲ ಯಾರಿಗೂ ತಾರತಮ್ಯ ಮಾಡದೇ 24 ತಾಸು ಎಲ್ಲರಿಗೂ ನೀಡುತ್ತದೆ. ಆದರೆ ಅದು ಯಾರಿಗಾಗಿಯೂ ನಿಲ್ಲುವುದಿಲ್ಲ ಅಥವಾ ಅದು ಯಾರಿಗಾಗಿಯೂ ಮುಂದೆ ಓಡುವುದಿಲ್ಲ. ಬಹಳ ವಿಚಿತ್ರವಾದುದು ಈ ಸಮಯದ ವ್ಯವಹಾರ.

ಇಂತಹ ಸಮಯದ ಕುರಿತು ನಮ್ಮ ಕನ್ನಡ ಸಾಹಿತ್ಯದ ಚೆಂಬೆಳಕಿನ ಕವಿ ಚೆನ್ನವೀರ ಕಣವಿಯವರು “ಕಾಲ ನಿಲ್ಲುವುದಿಲ್ಲ”..... ಎಂಬ ಕವನವನ್ನು ರಚನೆ ಮಾಡಿದ್ದಾರೆ. ಇದು ಅವರ ‘ನೆಲಮುಗಿಲು’ ಕವನ ಸಂಕಲನದಲ್ಲಿ ಮುದ್ರಣಗೊಂಡಿದೆ. ಕಾಲವನ್ನು ಇಲ್ಲಿ ಪ್ರಾಣಿ ಎಂದು ಕರೆದಿರುವುದು ವಿಶೇಷವಾಗಿದೆ. ಎಂತಹ ಪ್ರಾಣಿ ಎಂದರೆ ಅದು ಕೈಗೆ ಸಿಗದೆ ಸತಾಯಿಸುವ, ಸಿಕ್ಕರೆ ಚೆನ್ನಾಗಿ ಥಳಿಸಬೇಕು ಎಂದೆನಿಸುವಷ್ಟು ಕಾಟ ಕೊಡುವ ಪ್ರಾಣಿಯಾಗಿದೆ. ಈ ಪ್ರಾಣಿ ಕಣ್ಣಿಗೆ ಕಾಣಲೊಲ್ಲದು. ಕೈಗೆ ಸಿಗಲೊಲ್ಲದು, ಚಲನೆ ಮಾತ್ರ ನಿರಂತರವಾಗಿದೆ. ಯಾವುದೇ ಕಾರಣಕ್ಕೂ ನಿಲ್ಲಲೊಲ್ಲದು.

ಸಿಡಿಲು, ಮಿಂಚು, ಭೂಕಂಪ, ಜ್ವಾಲಾಮುಖಿ, ಸುನಾಮಿ, ಪ್ರವಾಹದಂತಹ ಅವಘಡ ಪ್ರಕೃತಿಯಲ್ಲಿ ಅಥವಾ ಮನುಷ್ಯನ ಜೀವನದಲ್ಲಿ ಘಟಿಸಿದಾಗ ಕಾಲ ತನ್ನ ಇರುವಿಕೆಯನ್ನು ಪ್ರಕಟಪಡಿಸುತ್ತದೆ. ಮಾನವ ತನ್ನ ಈ ಸ್ಥಿತಿಗೆ ಕಾರಣವೇನೆಂಬುದರ ಅವಲೋಕನಕ್ಕೆ ಹಚ್ಚುತ್ತದೆ. ದುರ್ಬಲ ಮನಸ್ಸಿನವನಿಗೆ “ದೇವರೆ ನೀನ್ಯಾಕೆ ಹೀಗೆ ಮಾಡಿದೆ” ಎನ್ನುವ ಪಲಾಯನವಾದ ಹುಟ್ಟುತ್ತದೆ.

ಸಂಗೀತ ಮೇಳದಲ್ಲಿ ತಬಲ ಇರುವಂತೆ ಕಾಲ ನಮ್ಮೊಂದಿಗೆ ಇರುತ್ತದೆ ಎಂದು ಕವಿ ಹೇಳುತ್ತಾರೆ. ಅದು ನಿಜವೂ ಹೌದು. ತಬಲ ಮುಖ್ಯ ವಾದನವಲ್ಲ, ಅದು ಇತರ ಸಂಗೀತ ಪರಿಕರಗಳಿಗೆ ಸಾಥ್ ನೀಡುತ್ತದೆ. ಅಂತೆಯೇ ಜೀವನವೆಂಬ ಸಂಗೀತ ಮೇಳದಲ್ಲಿ ಜರುಗುವ ಪ್ರತಿಯೊಂದು ಕ್ರಿಯೆ ಪ್ರಕ್ರಿಯೆಗೂ ಕಾಲದ ಸಾಥ್ ಇದ್ದೇ ಇರುತ್ತದೆ. ಸಂಗೀತ ಸುಶ್ರಾವ್ಯವಾಗಿದ್ದರೆ ಅಲ್ಲಿ ತಬಲದ ಮಹಿಮೆ ಕಾಣುವುದಿಲ್ಲ. ಆದರೆ ಸಂಗೀತದಲ್ಲಿ ಅಪಸ್ವರಗಳಾದರೆ ತಬಲದ ಸದ್ದು ಅಧಿಕವಾಗಿ ಅಭಾಸವಾಗಿ ಈ

ಅಪಸ್ವರಕ್ಕೆ ತಬಲವೇ ಕಾರಣ ಎಂಬ ಗೂಬೆ ಕೂರಿಸುವ ಸಂಭವವೂ ಇದೆ. ಆದ್ದರಿಂದಲೇ ಲೇಖಕರು ನೀಡಿರುವ ಹೋಲಿಕೆ ಸಮಂಜಸವಾಗಿದೆ.

ಇಂತಹ ಕಾಲವನ್ನು ಹಿಡಿದಿಟ್ಟು ಗಾಣವಾಡಿಸಲು ಗಡಿಯಾರವನ್ನು ಕಂಡು ಹಿಡಿದಿದ್ದೂ ಈ ಗಾಣ ತಿರುಗದೇ ಇದ್ದರೂ ಸಮಯ ಯಾವ ಕಾರಣಕ್ಕೂ ನಿಲ್ಲುವುದಿಲ್ಲ ಎಂಬ ಮಾತು ಬೇರೆ. ಸಮಯದ ವ್ಯವಹಾರವೇ ವಿಚಿತ್ರ ಎಂದು ಮೊದಲೇ ಹೇಳಿದೆನಲ್ಲ. ಅದು ಒಮ್ಮೊಮ್ಮೆ ಸಂತೋಷದ ಮೇರು ಪರ್ವತವನ್ನು ಹತ್ತಿಸಿದರೆ, ಕೆಲವೊಮ್ಮೆ ಅಯೋಗ್ಯರ ಕಾಲನ್ನು ಹಿಡಿಯುವಂತೆ ಮಾಡುತ್ತದೆ. ಕೆಲವೊಮ್ಮೆ ನಾಡಿಮಿಡಿತ ನೋಡಿ ಎದೆಗೆ ಕಿವಿಗೊಟ್ಟು ನಮ್ಮ ಗುಂಡಿಗೆಯ ಎದೆಬಡಿತ ಸಮಯಕ್ಕೆ ತಕ್ಕಷ್ಟು ಮಿಡಿಯುತ್ತಿದೆಯೋ ಇಲ್ಲವೋ ಎಂಬ ಪರೀಕ್ಷೆಗೂ ಹಚ್ಚುತ್ತದೆ. ಕೆಲವೊಮ್ಮೆ ಭೂತ ಭವಿಷ್ಯದ ಚಿಂತೆಯಿಲ್ಲದಂತೆ ಎಲ್ಲವೂ ಸರಾಗವಾಗಿರುವಾಗ ಈ ಕಾಲದ ಪರಿವೆಯೂ ಇರದಂತೆ ನಿರಾಯಾಸವಾಗಿ ಉಸಿರಾಡುವಂತೆ ಮಾಡುತ್ತದೆ.

ಕನಕದಾಸರು ಹೇಳುವಂತೆ 'ಬಯಲು ಆಲಯದೊಳಗೋ? ಆಲಯವು ಬಯಲೊಳಗೋ? ಕಾಲವಿದೆಯೆಂದೂ ಈ ಲೋಕ ವ್ಯವಹಾರಗಳು ನಡೆಯುತ್ತಿವೆಯೋ? ಅಥವಾ ಈ ಲೋಕ ವ್ಯವಹಾರ ನಡೆಯಲು ಕಾಲ ಇದೆಯೋ ಎನ್ನುವ ಗೊಂದಲವುಂಟಾಗುತ್ತದೆ. ಆದರೆ "ಕಾಲಾಯ ತಸ್ಮಾಯ ನಮಃ", "ಕಾಲ ಕೈಗೂಡಿದಾಗ ಲೇಸಿನ ಮೇಲೆ ಲೇಸು ಒದಗುವುವು" ಎನ್ನುವ ಲೋಕಾರೂಢಿಯಲ್ಲಿ ನಂಬಿಕೆ ಇರುವವರು ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳುವುದಿಲ್ಲ. ಆಗುವ ಕಾಲಕ್ಕೆ ಎಲ್ಲ ಆದೀತು ಎನ್ನುವ ಉದಾಸೀನಭಾವ ತಾಳುವನು ಎಂದು ಲೇಖಕರು ಹೇಳುವಾಗಲೇ ಸಮಯ ತಾನಾಗಿ ಬರುವುದಿಲ್ಲ, ನಾವು ಇರುವ ಸಮಯವನ್ನು ಸದುಪಯೋಗ ಪಡಿಸಿಕೊಂಡು ಅಗೋಚರ ಕಾಲದ ಚಲನೆಯೊಂದಿಗೆ ಹೆಜ್ಜೆಹಾಕಬೇಕಾಗಿದೆ ಎಂಬುದನ್ನು ಸಮಯವೆಂಬ ಕುದುರೆಯನ್ನು ಲಗಾಮು ಹಿಡಿದು ಸವಾರಿ ಮಾಡಲು ಹೆಣಗಾಡುವ ಚಿತ್ರಣ ನೀಡುವ ಮೂಲಕ ತಿಳಿಸಿದ್ದಾರೆ. ಕಣ್ಣು ಮಿಟುಕಿಸುವುದರೊಳಗೆ ನಮ್ಮ ನಿಯಂತ್ರಣ ಮೀರಿ ಈ ಕುದುರೆ ಓಡಿ ಹೋಗುವ ಸಂಭವವೇ ಹೆಚ್ಚು. ತಡವಾದುದಕ್ಕೆ ವಾಹನ ಕೈ ತಪ್ಪುವುದು, ಅವಕಾಶ ವಂಚಿತರಾಗುವುದು ಅಥವಾ ಈ ತಡದಿಂದಾಗಿ ನಮ್ಮ ವ್ಯಕ್ತಿತ್ವವನ್ನೇ ಪ್ರಶ್ನಿಸುವ ಹಂತಕ್ಕೆ ತಲುಪುವುದು ಇತ್ಯಾದಿ ಸಂದರ್ಭಗಳು ಈ ಅರಿವನ್ನು ಚೆನ್ನಾಗಿಯೇ ಉಂಟು ಮಾಡುತ್ತವೆ.

ಬದುಕಿನಲ್ಲಿ ಹಲವಾರು ಹತಾಶೆ, ನಿರಾಸೆ, ಸೆಣಸಾಟಗಳ ನಡುವೆ ಸಮಯ ಬದಲಾಗಬಹುದೆಂಬ ನಿರೀಕ್ಷೆಯ ನಡುವೆ ಬಣ್ಣದ ನೂಲುಗಳಂತೆ ಸಂತಸದ ಸಂದರ್ಭಗಳು ಒದಗುತ್ತವೆ. ನಾವು ಅಂದುಕೊಂಡದ್ದು ವಾಸ್ತವ ಪ್ರಪಂಚಕ್ಕೂ ಬಹಳ

ಅಂತರವಿರುವುದನ್ನು ಮನಗಂಡು ಸಾಹಸಮಾಡಿ ಬದುಕು ಬದಲಿಸಿಕೊಳ್ಳಲು ಪ್ರಯತ್ನಿಸಿದರೂ ಹೆಜ್ಜೆಯಿಟ್ಟಲ್ಲಿ ಅನುಭವಕ್ಕೆ ಬರುವ ಜೋಲಿ ಹಿಡಿದಿರುವ ಮಣ್ಣು', ದುಮುಕುವ ನೀರು', ವಾಸ್ತವಕ್ಕೂ ಕಲ್ಪನೆಗೂ ಭೂಮಿ ಆಕಾಶದಷ್ಟು ಅಂತರವಿರುವುದನ್ನು ತಿಳಿಸಿವೆ. ಮನುಷ್ಯನ ಸುಖ ದುಃಖಗಳನ್ನು ಈ ಭಾಗದಲ್ಲಿ ಹಿಡಿದಿಡಲಾಗಿದೆ.

ಮಾನವ ಸಾಧನೆಯ ಕುರುಹುಗಳನ್ನು ವಿವರಿಸುವ ಎರಡನೇ ಭಾಗದಲ್ಲಿ ಪ್ರಕೃತಿಯಲ್ಲಿರುವ ಸೂರ್ಯ, ಚಂದ್ರ, ವೃಕ್ಷ, ಋತುಗಳು, ಹಕ್ಕಿ ಪಕ್ಕಿಗಳು, ಪರ್ವತಗಳು, ಆಕಾಶ, ಗಾಳಿ ಇತ್ಯಾದಿಗಳು ಅನಂತ ಕಾಲದಿಂದಲೂ ತಮ್ಮ ಕರ್ತವ್ಯವನ್ನು ಚಾಚು ತಪ್ಪದೇ ಒಂದು ದಿನವೂ ಗೈರಾಗದಂತೆ ನಿರಂತರವಾಗಿ ಮಾಡುತ್ತಿದ್ದಾರೆ. ಆದಾಗ್ಯೂ ಅವರಿಗೆ ಅವರ ಕೆಲಸದ ಕುರಿತು ಬೇಸರವಿಲ್ಲ. ಅಹಂ ಇಲ್ಲ, ಅಲ್ಲಿರುವುದು ಕೇವಲ ಅರ್ಪಣೆ ಸಕಲ ಲೋಕಕ್ಕೂ ಅರ್ಪಣೆ. ಇಂತಹ ಮಾದರಿಗಳು ನಮ್ಮ ಕಣ್ಮುಂದೆ ಇದ್ದಾಗ್ಯೂ ನಮ್ಮ ಕರ್ತವ್ಯದಿಂದ ನುಣುಚಿಕೊಳ್ಳಲು ಕಾರಣಗಳನ್ನು ಹುಡುಕುತ್ತಿದ್ದೇವೆ. ಹಾಗೆಂದ ಮಾತ್ರಕ್ಕೆ ಮಾನವನೇನು ಸಾಮಾನ್ಯನಲ್ಲ. ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ ಇತ್ಯಾದಿಗಳ ಮೂಲಕ ಎತ್ತಿನ ಬಂಡಿಯಿಂದ ಅಂತರಿಕ್ಷಯಾನದವರೆಗೂ ಸಾಧನೆ ನಿರಂತರವಾಗಿ ಸಾಗುತ್ತಿದೆ. ಆಧುನಿಕತೆಯೊಂದಿಗೆ ಬದುಕಿಗೆ ಆಡಂಬರದ ಸೋಗು ಅವನಿಗೆ ಜೊತೆಯಾಗಿ ಬಿಟ್ಟಿದೆ ಎಂಬುದನ್ನು "ಮೈಕಿನಲ್ಲಿ ಕೊಕ್ಕೊ ಎಂದು ಕೂಗುವುದು" ಎಂಬ ನಿದರ್ಶನದಿಂದ ತಿಳಿಸಿದ್ದಾರೆ. ಈ ಜಾಗತೀಕರಣ ಮತ್ತು ಉದಾರೀಕರಣದಿಂದಾಗಿ ಪಾಶ್ಚಿಮಾತ್ಯ ದೇಶಗಳು ನಮ್ಮ ದೇಶದಲ್ಲಿ ಅವರ ಮಾಲ್‌ಗಳು, ಐಷಾರಾಮಿ ವಸ್ತುಗಳ ಮಾರಾಟ ಮಳಿಗೆ ಹಾಗೂ ಪಾಶ್ಚಾತ್ಯ ಸಂಸ್ಕೃತಿಯ ಸೆಳೆತ ನಮ್ಮ ದೇಶದ ಜನತೆಯನ್ನು ಪ್ರಭಾವಿಸಿ ಸರಿತಪ್ಪುಗಳ ವಿವೇಕವಿಲ್ಲದೆ ಇವುಗಳ ಅಂಧಾನುಕರಣೆ, ಕೊಳ್ಳುಬಾಕುತನ ಇತ್ಯಾದಿಗಳನ್ನು "ಮುಸುಗರೆದ ಮೂಡಲ ಹೋರಿ" ಮತ್ತು "ಸಾದಾ ಎತ್ತಿನ" ಪ್ರತಿಮೆಯ ಮೂಲಕ ವಿವರಿಸಿದ್ದಾರೆ.

ಹಳೆಯದೆಲ್ಲ ಉಪಯೋಗವಿಲ್ಲದ್ದು ಎಂಬ ಮನೋಭಾವ ಇಂದು ಸಾಮಾನ್ಯವಾಗಿದೆ. ಅಭಿವೃದ್ಧಿ ಮತ್ತು ಆಧುನಿಕತೆಯ ಸ್ಪಷ್ಟತೆ ಇಲ್ಲದಿದ್ದರೂ ಇವೆರಡರ ಹೆಸರಿನ ಸೋಗಿನಲ್ಲಿ ಮೆರೆಯುತ್ತಿರುವ ಪ್ರಸಂಗವನ್ನು ಕಂಡು 'ನೈವೇದ್ಯಕ್ಕೆ ಪಾಕವೇ ಸಿದ್ಧವಾಗಿಲ್ಲ' ಆಗಲೇ ಪ್ರಸಾದ ಹಂಚಿದ್ದೇವೆ ಎಂಬ ಸಾಲುಗಳಲ್ಲಿ ಕಂಡುಬರುತ್ತದೆ.

ಕುತೂಹಲವಿಲ್ಲದ, ಉತ್ಸಾಹವಿಲ್ಲದ, ಸಂಯಮವಿಲ್ಲದ, ಸ್ವಾರ್ಥತುಂಬಿದ, ಸಂಕುಚಿತ, ಅಹಂ ಇತ್ಯಾದಿ ಋಣಾತ್ಮಕತೆಯಿಂದ ಕೂಡಿದ ಇಂದಿನ ಮಾನವ ಸ್ಥಿತಿಯನ್ನು ಕಂಡು ಕವಿ ಬದುಕಿನ ರಸಪಾಕ ತಯಾರಾಗಲು ಮಾಡಬೇಕಾದುದೇನು

ಎಂಬುದಕ್ಕೆ ಉತ್ತರವನ್ನು ಕೊಡುವ ಹಾಗೆ ಈ ಕವನವಿದೆ.

ಇಡೀ ಕವಿತೆ ಕಾಲದೊಂದಿಗೆ ಸಾಗಿ ಬಂದ ಮನುಷ್ಯನ ಗತಿಶೀಲವಾದ ಬದುಕಿನ ಹೋರಾಟದ ಅಭಿವ್ಯಕ್ತಿಯಾಗಿದೆ. ಜೊತೆಗೆ ಸಾಹಿತ್ಯ ಪರವಾದ ಅರ್ಥವೂ ಕವಿತೆಗಿದೆ. ತಮ್ಮ ವೈಯಕ್ತಿಕ ಕಾವ್ಯದ ಮತ್ತು ಬದುಕಿನ ನಿಲುವುಗಳನ್ನು ಕಣವಿ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಉದಾಹರಣೆಯಾಗಿ 'ಕಾಲ ನಿಲ್ಲುವುದಿಲ್ಲ' ಕವನದ ಈ ಸಾಲುಗಳನ್ನು ಗಮನಿಸಬಹುದು.

**"ಮಾಡಿ ಉಂಡಿದ್ದೇವೆ ನಮ ನಮಗೆ ಸೇರಿದ ಅಡಿಗೆ**
**ಇರಬಹುದು ಇದರಲ್ಲಿ ಕೆಲಭಾಗ ಜೀವನ ಸತ್ವ ಕಡಿಮೆ**
**ಇದ್ದ ಶಕ್ತಿಯಲ್ಲಿ ತುಸುದೂರ ನಡೆದಿದ್ದೇವೆ**
**ರೂಢಿಯಾಗಿದೆ ಒಬ್ಬೊಬ್ಬರಿಗೂ ಒಂದೊಂದು ಬಗೆಯ ನಡಿಗೆ**
**ಮುಖ್ಯ ಬೇಕಾದದ್ದು ಜೀವಂತ ಗತಿ, ಹೊಸ ನೆತ್ತರಿನ ಕೊಡುಗೆ"**

ವ್ಯರ್ಥ ಸಮಯ ಕಳೆಯದೆ ಜ್ಞಾನ ವಿಕಾಸದತ್ತ ಸಾಗಬೇಕು. ಇಂದೀಕರಣವಾಗದ ಜ್ಞಾನ ನಮ್ಮನ್ನು ಎಲ್ಲ ಆಯಾಮಗಳಿಂದಲೂ ಸಂಕುಚಿತಗೊಳಿಸುತ್ತದೆ. ಸಂಕುಚಿತ ವಿಚಾರಗಳು ಯಾವುದೇ ಪ್ರಯೋಜನಕ್ಕೆ ಬಾರದಂತವುಗಳಾಗುತ್ತದೆ ಎಂಬುದನ್ನು 'ಬಿಸಿ ಅನ್ನ' ತಂಗೂಳಾಗುವ ಹಾಗೂ ತಂಗೂಳು ಹಳಸಿದಾಗ ಅದು ಪ್ರಯೋಜನಕ್ಕೆ ಬಾರದೇ ಹೋಗುವ ಸ್ಥಿತಿಯನ್ನು ತಿಳಿಸಿದ್ದಾರೆ.

ಈಗಾಗಲೇ ಇರುವ ಮೂಲವಸ್ತುಗಳಿಂದ ಹೊಸ ಆವಿಷ್ಕಾರಗಳು, ಸಂಧಾನಗಳು, ಸಂಶೋಧನೆಗಳು, ಬದಲಾವಣೆಗಳು ಆಗಬೇಕಾಗಿದೆಯೇ ಹೊರತು ಇಲ್ಲದ್ದನ್ನು ಸೃಷ್ಟಿಸುವ ಬ್ರಹ್ಮಸೃಷ್ಟಿಯನ್ನೇನೂ ಮಾಡಬೇಕಾದುದಿಲ್ಲ ಎಂಬುದು ಕವಿಯ ಭಾವನೆ. "ಅತಿಯಾದರೆ ಅಮೃತವು ವಿಷ" ಸ್ವಾರ್ಥಪರವಾದ ಪ್ರಗತಿ ಅಜೀರ್ಣವಾಗುವುದು. ಬದುಕು ಎಂಬುದು ಒಂದು ಪಾಕವಿದ್ದಂತೆ. ಆ ಪಾಕ ರಸಪಾಕವಾಗಬೇಕಾದರೆ ಬಹಳ ತಾಳ್ಮೆ ಬೇಕು. ಅಡುಗೆಗೆ ಬಳಸಿದ ಎಲ್ಲ ವ್ಯಂಜನಗಳು ಸೇರಿ ಕುದ್ದು, ಮಿದ್ದು ರುಚಿಯನ್ನು ನೀಡುತ್ತಿವೆಯೋ ಹಾಗೆಯೇ ಬದುಕಿನ ಸಿಹಿ–ಕಹಿ ಅನುಭವಗಳೊಂದಿಗೆ ಸಹಕಾರ, ಸೌಹಾರ್ದ, ಸಹನೆ, ಸಹಾನುಭೂತಿ ಇತ್ಯಾದಿಗಳು ಸೇರಿ ಶೃತಿಗೂಡಿದ ರಾಗದಂತೆ ಬದುಕು ಇಂಪಾಗಿರುತ್ತದೆ. "ಗಾಳಿಯ ಬೆನ್ನಿನ ಮೇಲೆ ಮೋಡದ ಸವಾರಿ" ಎಂಬುದು ಸುಖ ನೆಮ್ಮದಿಯ ವರ್ಷ ಸುರಿಯುತ್ತದೆ ಎಂದು ಕವಿಯ ಆಶಯವಾಗಿದೆ.

ಆದರೆ ಇಂದು ಉತ್ಸಾಹಮಯವಾಗಿರಬೇಕಾದ ಬದುಕು ಸಪ್ಪೆಯಾಗುತ್ತಿದೆ. ಪ್ರಕೃತಿಯಲ್ಲಿ ಆಗುವ ಬದಲಾವಣೆಗಳು ಯಾವುದೇ ಕುತೂಹಲ ಮೂಡಿಸುತ್ತಿಲ್ಲ. ಈ ಉತ್ಸಾಹ, ಸಂತಸ ಮಕ್ಕಳಲ್ಲೂ ಕಾಣುತ್ತಿಲ್ಲ. ಬಹುಶಃ ಅಜ್ಜ ಅಜ್ಜಿಯರ ಊರಿನಲ್ಲಿ

ಕಳೆಯುವ ಬೇಸಿಗೆ ರಜಾ ದಿನಗಳು ಇಂದು ಸಂಸ್ಕೃತಿಯ ಸೋಗಿನಲ್ಲಿ ಕಳೆದು ಹೋಗುತ್ತಿರುವುದು ಇದಕ್ಕೆ ಕಾರಣವಾಗಿರಬಹುದೇನೊ ಎಂಬ ಸುಳಿವು ಕವಿತೆಯಲ್ಲಿದೆ. ತರಾತುರಿಯ ಬದುಕಿನಲ್ಲಿ ನೆಮ್ಮದಿಯ ಬದುಕಿನ ಕನಸು ಕೂಡ ಮರೀಚಿಕೆಯಾಗಿದೆ. ಕಾಲ ತನ್ನ ಇರುವಿಕೆಯಲ್ಲಿ ಯಾವ ಬದಲಾವಣೆ ಮಾಡಿಕೊಂಡಿಲ್ಲ. ಬದಲಾವಣೆಗಳು ನಮ್ಮೊಳಗೆ ಆಗಿವೆ. ಕಾಲದ ಮೇಲೆ ಗೂಬೆ ಕೂರಿಸುವ ಕೆಲಸ ಅವ್ಯಾಹತವಾಗಿ ಸಾಗಿದೆ.

ಕಾಲದ ಬದಲಾವಣೆ ಬದುಕಿನಲ್ಲಿ ಅಷ್ಟೇ ಅಲ್ಲ ಸಾಹಿತ್ಯದಲ್ಲೂ ಆಗಿರುವುದು ನಮ್ಮೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ಕವಿ ಈ ಕವನದಲ್ಲಿ ಈ ಬದಲಾವಣೆಯನ್ನು ಬಹಳ ಸೊಗಸಾಗಿ ವರ್ಣಿಸಿದ್ದಾರೆ. 10ನೇ ಶತಮಾನದ ಚಂಪು ಸಾಹಿತ್ಯವನ್ನು ತಂಪುಕೊಳಕ್ಕೆ ಹೋಲಿಸಿದ್ದಾರೆ. ಆ ತಂಪು ಕೊಳವು ಕಂದ, ವೃತ್ತಗಳ ಝರಿ, ಗದ್ಯದ ಉದ್ಯಾನ, ಹದಿನೆಂಟು ವರ್ಣನೆಗಳ ಹುಲ್ಲುಗದ್ದೆಗಳಿಂದ ನಿರ್ಮಾಣವಾಗಿದೆ ಎಂದು ಹೇಳಿದ್ದಾರೆ. ತದನಂತರದ ವಚನ ಸಾಹಿತ್ಯ, ದಾಸ ಸಾಹಿತ್ಯ, ತತ್ವಪದಗಳನ್ನೊಳಗೊಂಡ ಹಾಡುಗಬ್ಬಗಳ ಕೊಲ್ಲಾರಿ ಬಂಡಿ ನಂತರ ಭಾವಗೀತೆಗಳು ಬಂದಿರುವುದನ್ನು ವಿವರಿಸಿದ್ದಾರೆ. ಹೊಸಗನ್ನಡ ಸಾಹಿತ್ಯ, ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಸಾಹಿತ್ಯ ಬಗೆಗಳನ್ನು ವೈವಿಧ್ಯಮಯ ರಸಪಾಕಗಳ ಅಡುಗೆ ಎಂದು ಹೇಳಿದ್ದಾರೆ. ಈ ಅಡುಗೆಯಲ್ಲಿ ಸತ್ವವಿರುವುದು, ಸತ್ವ ಇಲ್ಲದಿರುವುದು ಇವೆ.

ಒಟ್ಟಾರೆ ಆ ಸಾಹಿತ್ಯದ ಜೀವಂತಿಕೆ ನವಪೀಳಿಗೆಗೆ ಉತ್ಸಾಹ, ವಿವೇಕ, ಚೈತನ್ಯಾದಿಗಳನ್ನು ತುಂಬುವುದರಲ್ಲಿ ಇದೆ. ಕಾಲ ಎಂದಿಗೂ ನಿಲ್ಲುವುದಿಲ್ಲ. ನಿರಂತರವಾಗಿ ಸಾಗುತ್ತಿದೆ. ಪ್ರಕೃತಿಯಲ್ಲಿ ಏನೇ ಏರಿಳಿತಗಳಾದರು ತನ್ನ ಚಲನೆ ವ್ಯತಿರಿಕ್ತಗೊಳಿಸುವುದಿಲ್ಲ. ಹಗಲು-ಇರುಳಿನ ಈ ಚಕ್ರ ನಿರಂತರವಾಗಿ ಉರುಳುತ್ತಿರುತ್ತದೆ. ಈ ಕಾಲಚಕ್ರದ ಆಟದಲ್ಲಿ ಎಲ್ಲರೂ ಭಾಗವಹಿಸಬಹುದು. ಗೆದ್ದವರಿಗೆ ಪದಕ, ಪ್ರಶಸ್ತಿ ಕೀರ್ತಿಗಳಿದ್ದರೆ ಸೋತವರಿಗೆ ಗೆಲುವಿನ ಹಾದಿ ಹುಡುಕಲು ಗೆದ್ದವರ ಅನುಭವದ ಪಾಠಗಳು ಇವೆ. ಆದರೆ ನಿಂತು ನೋಡುವವರಿಗೆ ಕೇವಲ ಸಂತಸಪಡುವ ಭಾಗ್ಯ ಮಾತ್ರ ಇದೆ ಎಂದು ಕವಿ ಉಲ್ಲೇಖಿಸಿರುವುದು ಬಹಳ ತಾತ್ವಿಕವಾಗಿ ಮೂಡಿ ಬಂದಿದೆ.

ಇಲ್ಲಿನ ಕವಿತೆ ಮೂರು ಚಿಂತನೆಗಳಲ್ಲಿ ಸಾಗಿ ಬಂದಿದೆ. ಅದು ಮನುಷ್ಯನ ಸುಖ-ದುಃಖ, ಮಾನವನ ಸಾಧನೆ ಹಾಗೂ ಇಂದಿನ ಮಾನವನ ಸ್ಥಿತಿ ಮತ್ತು ಸಾಹಿತ್ಯದ ಬಗ್ಗೆ ಚಿಂತನೆಗಳನ್ನು ಇಲ್ಲಿ ಕವಿಗಳು ಕಂಡರಿಸಿದ್ದಾರೆ. ಕಾಲಕ್ಕೆ ತಕ್ಕಂತೆ ಮನುಷ್ಯ ಎಲ್ಲ ವಿಚಾರಗಳಲ್ಲೂ ಬದಲಾವಣೆಗೆ ಒಳಗಾಗುತ್ತಾನೆ ಎಂಬುದನ್ನು ಇಡೀ ಕವಿತೆಯಲ್ಲಿ ಚಿತ್ರಿಸಿದ್ದಾರೆ. ಮಾನವನ ನಡೆ-ನುಡಿ, ಜೀವನ ವಿಧಾನ, ಸಂಸ್ಕೃತಿ, ಧರ್ಮ, ವಿಜ್ಞಾನ, ಸಾಹಿತ್ಯ ಧೋರಣೆಗಳಲ್ಲಿ ಕಾಲಕ್ಕೆ ತಕ್ಕಂತೆ ಬದಲಾವಣೆಗಳು

ಘಟಿಸುವುದರಿಂದಲೇ ಕವಿಯು ಕಾಲ ನಿಲ್ಲುವುದಿಲ್ಲ ಎಂದಿದ್ದಾರೆ. ಏನೇ ಇರಲಿ ಕಾಲವು ಜಂಗಮಸ್ವರೂಪಿಯೂ, ಚಲನಶೀಲವೂ ಎಂಬುದನ್ನು ಕವಿತೆ ಪ್ರಕಟಪಡಿಸಿದೆ.

ಕಾಲ ಎನ್ನುವುದು ಕೈಗೆ ಸಿಗದ ಅದೃಶ್ಯವಾದದ್ದು. ಕಾಲವನ್ನು ಅಳೆಯುವಂತಹ ಸಾಧನಗಳಿಂದ ನಿಯಂತ್ರಿಸಬಹುದೇ ಹೊರತು ವಾಸ್ತವವಾಗಿ ಕಾಲವನ್ನು ನಿಯಂತ್ರಿಸಲು ಯಾರಿಂದಲೂ ಸಾಧ್ಯವಿಲ್ಲ. ಜೀವನದಲ್ಲಿ ಬೇಸರ, ಹತಾಶೆ, ದುಃಖ–ದುಮ್ಮಾನ ಮುಂತಾದವುಗಳಿಂದ ನರಳುವ ಕಾಲ ಒಂದು ಶಾಪ ಎಂಬಂತೆ ಆಗಿದೆ. ಕಾಲ ಯಾವ ನಿಯಂತ್ರಣಕ್ಕೂ ಒಳಗಾಗದಿದ್ದರೂ ಮಾನವ ಸಮಾಜದ ಮತ್ತು ಸಂಸ್ಕೃತಿ, ಇತಿಹಾಸ, ಸಾರಿಗೆ ಸಂಪರ್ಕ, ಪ್ರಸಾರ ಮಾಧ್ಯಮ ಮುಂತಾದ ಕ್ಷೇತ್ರಗಳಲ್ಲಿ ಸಾಧಿಸಿರುವ ಸಾಧನೆಗಳು ಅಲ್ಪವಲ್ಲ. ಅವು ಮಹತ್ತರವಾಗಿವೆ. ಕಾಲ ಒಂದು ನಿಶ್ಚಲ ವಸ್ತುವಲ್ಲ, ಕಾಲ ಹೇಗೆ ಹೊರಳುವುದು ಎಂದು ಯಾರು ಲೆಕ್ಕಹಾಕುವುದಿಲ್ಲ. ಪರಿವರ್ತನೆಯೇ ಕಾಲದ ನಿಯಮ. ಅದು ಜಗದ ನಿಯಮವೂ ಹೌದು. ಕಣವಿಯವರ ಕಾಲ ನಿಲ್ಲುವುದಿಲ್ಲ ಎಂಬ ಈ ಲೇಖನದಲ್ಲಿ ವಿಮರ್ಶಿಸಲಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಚೆನ್ನವೀರ ಕಣವಿ, (1989), ಕಣವಿ ಸಮಗ್ರ ಕಾವ್ಯ, ಸಂವಹನ ಪ್ರಕಾಶನ, ಮೈಸೂರು.
2. ರಾಮಚಂದ್ರನ್ ಸಿ.ಎನ್., (2013), ಸಾಹಿತ್ಯ ವಿಮರ್ಶೆ, ಅಂಕಿತ ಪ್ರಕಾಶನ, ಬೆಂಗಳೂರು.
3. ಚೆನ್ನವೀರ ಕಣವಿ, (1965), ನೆಲಮುಗಿಲು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.
4. ಹೆಗಡೆ ಜಿ.ಎಮ್., (16 ಫೆಬ್ರುವರಿ 2022), ಅಕ್ಷರ ಆಕರದಲ್ಲಿ ಚೆನ್ನವೀರ ಕಣವಿ, ಪ್ರಜಾವಾಣಿ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.